8. 2014–15 ನೇ ಸಾಲಿನ ಆಯವ್ಯಯದ ಮೇಲೆ ಮುಂದುವರಿದ ಸಾಮಾನ್ಯ ಚರ್ಚೆ:–

ಶ್ರೀ ಗುರುಪಾಟೀಲ ಶಿರವಾಳ (ಶಹಾಪುರ):– ಮಾನ್ಯ ಅಧ್ಯಕ್ಷರೆ, 2014–15ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಸನ್ಮಾನ್ಯ ಅಧ್ಯಕ್ಷರೆ, ಈ 9 ತಿಂಗಳು ಕಳೆದ ಮೇಲೆ ಹೋದ ಒಂದು ಬಜೆಟ್‌ನಲ್ಲಿ ಯಾವರೀತಿಯಾಗಿ ಎಲ್ಲಾ ಕಾರ್ಯಕ್ರಮಗಳು ಅನುಷ್ಠಾನಗೊಂಡಂತಹ ರೀತಿಯನ್ನು ನೋಡಿದರೆ ಅಭಿವೃದ್ಧಿ ಕಾರ್ಯಗಳು ಬಹಳ ಮಂದಗತಿಯಲ್ಲಿ ನಡೆಯುತ್ತಿವೆ ಎನ್ನುವುದು ನಮ್ಮ ಗಮನಕ್ಕೆ ಬರುತ್ತದೆ. ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಏನು ಸರ್ಕಾರ ಅನ್ನಭಾಗ್ಯ ಯೋಜನೆಯನ್ನು ಯಾವ ಒಳ್ಳೆಯ ಉದ್ದೇಶ ಇಟ್ಟುಕೊಂಡು ತಂದಿದೆಯೋ ಇಲ್ಲಿ ಏನಾಗಿದೆ ಎಂದರೆ, ಈ ರಾಜ್ಯದಲ್ಲಿ ಸುಮಾರು ಒಂದು ಕೋಟಿ ಚಿಲ್ಲರೆ ಬಿ.ಪಿ.ಎಲ್ ಕಾರ್ಡ್‌ದಾರರು ಈ ಕುಟುಂಬಗಳ ಸಮೀಕ್ಷೆ ನಾವು ನೋಡಿದಾಗ ಒಂದು ಕುಟುಂಬದಲ್ಲಿ ನಾಲ್ಕು–ಐದು ಬಿಪಿಎಲ್ ಕಾರ್ಡುಗಳು ಇವೆ. ಇಲ್ಲಿ ಏನಾಗಿದೆ ಎಂದರೆ ಒಂದು ಕುಟುಂಬದಲ್ಲಿ ನಾಲ್ಕು ಕಾರ್ಡುಗಳು ಇರುವುದರಿಂದ ಒಂದು ಕಾರ್ಡ್‌ನಲ್ಲಿ ಅಕ್ಕಿ ತೆಗೆದುಕೊಂಡು ಅದನ್ನು ಉಪಯೋಗಿಸುವಂತಹದ್ದು. ಇನ್ನು ಉಳಿದಂತಹ ಕಾರ್ಡುಗಳಲ್ಲಿ ಎಲ್ಲಾ ಅಕ್ಕಿ ಶೇಖರಣೆಯಾಗಿ ಒಂದೊಂದು ಕುಟುಂಬದಲ್ಲಿ ಸುಮಾರು ಒಂದು ಕ್ವಿಂಟಾಲ್, ಎರಡು ಕ್ವಿಂಟಾಲ್ ಶೇಖರಣೆ ಮಾಡಿದ್ದಾರೆ. ನಾನು ಇದನ್ನು ಕೇಳಿದ್ದೇನೆ. ನಾನು ನಮ್ಮ ಹೊಲಗಳಿಗೆ ಬೆಳೆಗಳನ್ನು ನೋಡುವುದಕ್ಕೆ ಹೋದಾಗ ಅಲ್ಲಿರತಕ್ಕಂತಹ ಮಹಿಳೆಯರು ಮಾತನಾಡುತ್ತಿದ್ದರು. ಅದು ಏನೆಂದರೆ, ನಮ್ಮ ಮನೆಯಲ್ಲಿ ಇವತ್ತು ಒಂದು ಕ್ವಿಂಟಾಲ್ ಜಮಾ ಆಗಿದೆ. ನಮ್ಮ ಮನೆಯಲ್ಲಿ ಎರಡು ಕ್ವಿಂಟಾಲ್ ಆಗಿದೆ. ಇದೇ ರೀತಿಯಾಗಿ ಹತ್ತಾರು ಜನ ಅವರ ಮನೆಗಳಲ್ಲಿ ಸುಮಾರು 50 ಕ್ವಿಂಟಾಲ್ ಒಂದು ಕಡೆಯಲ್ಲಿ ಶೇಖರಣೆ ಮಾಡಿ ಯಾರು ಜಾಸ್ತಿ ಹಣ ಕೊಡುತ್ತಾರೋ ಅವರಿಗೆ ನಾವು ನೀವು ಎಲ್ಲಾ ಸೇರಿ ಕೊಡೋಣ ಎಂದು ಮಾತನಾಡಿದ್ದು ನನ್ನ ಕಿವಿಗೆ ಬಿದ್ದಂತಹ ಮಾತು. ಈ ಅನ್ನಭಾಗ್ಯದ ಉದ್ದೇಶ ಚೆನ್ನಾಗಿದೆ. ಆದರೆ, ಯಾರಿಗೆ

ಕೊಡಬೇಕಾಗಿತ್ತು ಆ ಫಲಾನುಭವಿಗಳಿಗೆ ಕೊಡುವಂತಹ ಕೆಲಸ ಮಾಡಬೇಕು. ನನಗೆ ಅನಿಸುತ್ತದೆ, ಈ 55 ವರ್ಷ ವಯಸ್ಸಿನ ಮೇಲಿರತಕ್ಕಂತಹ ವೃದ್ಧರಿಗೆ, ವಿಧವೆಯರಿಗೆ, ಅಂಗವಿಕಲರಿಗೆ ಇಂತಹ ಕಾರ್ಯಕ್ರಮಗಳನ್ನು ಕೊಟ್ಟರೆ ಒಳ್ಳೆಯದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು:– ಈ ವಿಷಯ ನಿಮಗೆ ಗೊತ್ತಾಯಿತಲ್ಲಾ, ಆಗ ಸ್ಥಳೀಯ ತಹಶೀಲ್ದಾರರಿಗೆ ಈ ವಿಷಯ ತಿಳಿಸಿ ಇದರ ಬಗ್ಗೆ investigate ಮಾಡಬಹುದಾಗಿತ್ತು ಅಲ್ಲವೇ?

ಶ್ರೀ ಗುರು ಪಾಟೀಲ ಶಿರವಾಳ:– ಸರ್, ಅದು investigation ಮಾಡಬೇಕು. ಇಲ್ಲದಿದ್ದರೆ,

ಅಧ್ಯಕ್ಷರು:– ನೀವು ಹೇಳಬೇಕಲ್ಲಾ?

ಶ್ರೀ ಗುರು ಪಾಟೀಲ ಶಿರವಾಳ:– ಇದಕ್ಕೆ ಕಾರಣ ಕಾಳಸಂತೆಕೋರರು.

ಅಧ್ಯಕ್ಷರು:– ಅದಕ್ಕೆ ನಾವೆಲ್ಲಾ ಶಾಸಕರು ನೀವು ಹೇಳಿದ ಪ್ರಕಾರ ನಿಮಗೆ ಸುದ್ದಿ ಬಂತು ಎಂದರೆ ತಹಶೀಲ್ದಾರರಿಗೆ ತಿಳಿಸಬೇಕು ಹಾಗೂ ಇವರಿಗೂ ತಿಳಿಸಬೇಕು.

ಇದನ್ನೆಲ್ಲಾ ತಪಾಸಣೆ ಮಾಡಿಸುತ್ತೇವೆಂದು ಮಾನ್ಯ ಆಹಾರ ಸಚಿವರು ಇದರ ಬಗ್ಗೆ ಮೊದಲು ಒಂದು Statement ಕೊಟ್ಟಿದ್ದರು. ಎಂ.ಪಿ. ಚುನಾವಣೆ ಇರುವ ಕಾರಣ ಯಾವುದನ್ನು ಮಾಡಿಸಲಿಲ್ಲ, ಎಂ.ಪಿ. ಚುನಾವಣೆ ಆದ ನಂತರ ಮಾಡಿಸಬಹುದೆಂದು ನನಗನಿಸುತ್ತದೆ.

ಅಧ್ಯಕ್ಷರು:– ಇವರು ಸರ್ವೆ ಮಾಡುವ ವಿಚಾರದಲ್ಲಿ, door to door ಹೋಗಿ ಸರ್ವೆ ಮಾಡಿಸಿ ಎಂದು ನಾನು ಹೇಳಿದ್ದೆ ಅದರೆ ಮೇಲೆ ಸೂಚನೆ ಕೊಟ್ಟು ಮಾಡಿದ್ದಾರೆ. ಕೆಲವು ಲೋಪವಾಗಿದೆ. ಶಾಸಕರಾದ ನಮ್ಮ ಗಮನಕ್ಕೆ ಇದು ಬಂದಾಗ ಅದನ್ನು ಮಟ್ಟ ಹಾಕುವ ಕೆಲಸವನ್ನು ನಾವು ಮಾಡದಿದ್ದರೆ ಹೇಗೆ?

ಶ್ರೀ ಗುರುಪಾಟೀಲ್ ಶಿರವಾಳ್:– ಇಲ್ಲಿ ಏನಾಗುತ್ತದೆಂದರೆ ಅಕ್ಕಿಯನ್ನು ತೆಗೆದುಕೊಂಡು ಒಂದು ಕಡೆ ಶೇಖರಣೆ ಮಾಡಿ ಬೇರೆ ಕಡೆ ಅಕ್ಕಿಯನ್ನು ಮಾರಾಟ ಮಾಡುವಂತಹ ಜನ ಕೂಡ ನಮ್ಮವರೆ ಇರುತ್ತಾರೆ. ಅವರಿಗೆ ಹೇಳುವಂತಹ ಸ್ಥಿತಿಯಲ್ಲಿ ನಾವಿರುವುದಿಲ್ಲ.

ಅಧ್ಯಕ್ಷರು:– ನೀವು ಕೇವಲ ಓಟಿಗೋಸ್ಕರ ಮಾಡುವುದಕ್ಕೆ ಹೋಗಬೇಡಿ. ನ್ಯಾಯವೇ ಬೇರೆ ಇರುತ್ತದೆ.

ಶ್ರೀ ಗುರುಪಾಟೀಲ್ ಶಿರವಾಳ್:– ಅದಕ್ಕೋಸ್ಕರ ಸತ್ಯವನ್ನು ತಮ್ಮೆದುರಿಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು:– ನಿಮ್ಮಂತಹ ಯುವಕರು ಮುಂದೆ ನಿಂತು ಇವುಗಳನ್ನು ಮಟ್ಟ ಹಾಕುವುದಕ್ಕೆ ಏನು ಮಾಡಬೇಕೋ ಆ ಕೆಲಸವನ್ನು ಮಾಡಬೇಕು. ಖಂಡಿತ ಈ ವಿಷಯವನ್ನು ತಾವು ಹೇಳಿದ್ದು ಒಳ್ಳೆಯದಾಯಿತು.

ಶ್ರೀ ಗುರುಪಾಟೀಲ್ ಶಿವರಾಳ್:– ಈ ಮಾತನ್ನು ಹೇಳುವುದಕ್ಕೆ ನಾನೇಕೆ ಇಚ್ಛೆಪಡುತ್ತೇನೆಂದರೆ ಅನ್ನಭಾಗ್ಯದಿಂದ ಇವತ್ತಿನ ದಿವಸ ನಾವು ರಸ್ತೆಯನ್ನು ಮಾಡುವುದಕ್ಕಾಗುತ್ತಿಲ್ಲ, ಸರಿಯಾದ ರೀತಿಯಲ್ಲಿ ನೀರನ್ನು ಕೊಡುವುದಕ್ಕಾಗುತ್ತಿಲ್ಲ, ವಿದ್ಯುತ್ ಕೊಡುವುದಕ್ಕಾಗುತ್ತಿಲ್ಲ.

ಅಧ್ಯಕ್ಷರು:– ಹಾಗೆಂದು ಅನ್ನಭಾಗ್ಯ ಯೋಜನೆಯನ್ನು ಕೈಬಿಡಬೇಕೇ?

ಶ್ರೀ ಗುರುಪಾಟೀಲ್ ಶಿರವಾಳ್:– ಇದನ್ನು ಅರ್ಹ ಫಲಾನುಭವಿಗಳಿಗೆ ಕೊಟ್ಟು ಎಷ್ಟು ಹಣ ವಿನಿಯೋಗ ಮಾಡಬೇಕೋ ಅಷ್ಟನ್ನು ಮಾಡಬೇಕಾಗುತ್ತದೆ. ಈ ಯೋಜನೆಯಿಂದ ಸುಮಾರು ಹಣ ಪೋಲಾಗುತ್ತಿದೆ. ಅದಕ್ಕೆ ದಯಮಾಡಿ ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು:– ಮಾನ್ಯ ಕಾನೂನು ಸಚಿವರು ಇಲ್ಲ, ಹಾಗಾಗಿ ನೀವೇ (Home Minsiter) ಸದಸ್ಯರಿಂದ statement ತೆಗೆದುಕೊಂಡು local policeಗೆ

ಕಳುಹಿಸಿ ಒಂದು case register ಮಾಡಿ ಇವರನ್ನು evidence ಎಂದು record ಮಾಡಿ proceed ಮಾಡಿ.

ಶ್ರೀ ಗುರುಪಾಟೀಲ್ ಶಿರವಾಳ್:– ಒಂದು ವಿಚಾರವನ್ನು ಹೇಳುತ್ತೇನೆ, ಒಂದು ಕೋಟಿ ಚಿಲ್ಲರೆ ಬಿ.ಪಿ.ಎಲ್. ಕಾರ್ಡ್‌ಗಳು ನಮ್ಮ ರಾಜ್ಯದಲ್ಲಿರಬೇಕಾದರೆ ಸುಮಾರು ಒಂದು ಕಾರ್ಡ್‌ನಿಂದ ಇಬ್ಬರು, ಮೂರು ಜನರನ್ನು ಹಿಡಿದರೆ ನಾಲ್ಕು ಕೋಟಿ ಚಿಲ್ಲರೆ ಜನರ ಬಿ.ಪಿ.ಎಲ್. ಕಾರ್ಡ್‌ದಾರರನ್ನಾಗಿ ನೋಡಬೇಕಾಗುತ್ತದೆ.

ಅಧ್ಯಕ್ಷರು:– ಮಾಡಬೇಕು. ಎಲ್ಲರ ಸಹಕಾರ . . .

ಶ್ರೀ ಗುರುಪಾಟೀಲ್ ಶಿವರಾಳ್:– ಇದು ಇದೆಯೇ ಎಂದು ನೀವು ತಪಾಸಣೆ ಮಾಡಲಿಲ್ಲವೆಂದರೆ ಎಲ್ಲರಿಗೂ ನೀವು ಕೊಡುತ್ತಾ ಹೋದರೆ ಹೇಗೆ?

ಅಧ್ಯಕ್ಷರು:– ನೀವು ಹೇಳುವುದು ನೂರಕ್ಕೆ ನೂರು ಸತ್ಯ. ನಿಮಗೆ ಸತ್ಯ ಗೊತ್ತಾಯಿತಲ್ಲ ಇಂತಹವರೆಂದು ಹೇಳಿ ನಿಮ್ಮ ಹೆಸರನ್ನು ಹೇಳುವುದಿಲ್ಲ.

ಶ್ರೀ ಗುರುಪಾಟೀಲ್ ಶಿವರಾಳ್:– ನಾನು ಹೇಳಿದ್ದೇನೆಂದು ನೀವು ನನ್ನನ್ನೇ ಟಾರ್ಗೆಟ್ ಮಾಡಿದರೆ ಹೇಗೆ?

ಅಧ್ಯಕ್ಷರು:– Witness ಆಗಿ ಅಷ್ಟೆ.

ಶ್ರೀ ಗುರುಪಾಟೀಲ್ ಶಿರವಾಳ್:– ಕೃಷಿ ಆಯೋಗದ ಬಗ್ಗೆ ಆಯವ್ಯಯದಲ್ಲಿ ಪ್ರಸ್ತಾಪವಾಗಿದೆ. ನಮ್ಮ ಕೃಷಿಕರಿಗೆ ಕೃಷಿ ಆಯೋಗದಿಂದ ಯಾವ ರೀತಿ ನ್ಯಾಯ ಸಿಗುತ್ತದೆಂಬುದನ್ನು ಸ್ವಲ್ಪ ಸ್ಪಷ್ಟಪಡಿಸಬೇಕಾಗುತ್ತದೆ. ತಮ್ಮ ಗಮನಕ್ಕೆ ತರುವ ಒಂದು ವಿಷಯವೇನೆಂದರೆ, ನಮ್ಮ ಭಾಗದಲ್ಲಿ ಹತ್ತಿಯನ್ನು ಹೆಚ್ಚು ಬೆಳೆಯುತ್ತೇವೆ. ಹತ್ತಿ ಬೆಳೆಯುವ ರೈತರಿಗೆ ಒಂದು ಕ್ವಿಂಟಾಲ್ ಹತ್ತಿಗೆ ಇವತ್ತಿನ ಬೆಲೆ 5,000 ರೂಪಾಯಿಗಳಿದೆ. ಇವತ್ತಿನ ದಿವಸ ಒಂದು ಕೆ.ಜಿ. ಹತ್ತಿಯನ್ನು by-product ರೂಪದಲ್ಲಿ ನಾವು ಬಟ್ಟೆ ರೂಪದಲ್ಲಿ ನಾವು ನೋಡಿದಾಗ ಒಂದು ಕೆ.ಜಿ. ಹತ್ತಿಯಿಂದ ಒಂಭತ್ತು ಮೀಟರ್ ಕಾಟನ್ ಬಟ್ಟೆ ತಯಾರಾಗುತ್ತದೆ. ಒಂದು ಕೆ.ಜಿ. ಹತ್ತಿಗೆ ರೈತರಿಗೆ ಸಿಗುತ್ತಿರುವುದು

ಕೇವಲ 50 ರೂಪಾಯಿಗಳು, ಬಟ್ಟೆ ರೂಪದಲ್ಲಿ ತಯಾರಾದಾಗ ಒಂಭತ್ತು ಮೀಟರ್ ಕಾಟನ್ ಬಟ್ಟೆಗೆ ಎಷ್ಟು ಹಣ ಬರುತ್ತದೆಂದು ತಾವು ನೋಡಬೇಕಾಗುತ್ತದೆ. ರೈತರಿಗೆ ಕೃಷಿ ಆಯೋಗ ರಚನೆಯಾದ ನಂತರ ಹೆಚ್ಚಿನ ರೀತಿಯಲ್ಲಿ ರೈತರಿಗೆ ಸಹಕಾರ ರೂಪದಲ್ಲಿ ಬೆಳದಂತ ಬೆಳೆಗೆ by-product ಮಾಡುವುದಕ್ಕೆ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟರೆ ಹೆಚ್ಚಿನ ಬೆಂಬಲ ಕೊಡುವುದು ಮತ್ತೊಂದು ಬೇಕಾಗುವುದಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುಕ್ಕೆ ಇಚ್ಛೆಪಡುತ್ತೇನೆ. ಶಿಕ್ಷಣದ ಬಗ್ಗೆ ಹೇಳಬೇಕೆಂದರೆ, 20 ವರ್ಷದ ಕೆಳಗೆ ಇದ್ದ ಶಿಕ್ಷಣ ವ್ಯವಸ್ಥೆಯಲ್ಲಿ ಮೇಸ್ಟರು ಸರಿಯಾಗಿ ಕಲಿಸುತ್ತಿದ್ದರು. ಆಗ ಬಿ.ಎ. ಲೆವೆಲ್‌ಗೆ ಅವರೇನಾದರೂ ಕಲಿತಿದ್ದರೆ ಈಗಿನ ಕಾಲದಲ್ಲಿ ಪಿ.ಹೆಚ್.ಡಿ. ಮಾಡಿರುವವರಿಗೆ ಎಷ್ಟು knowledge ಇದೆಯೋ ಅಷ್ಟು knowledge ಆಗಿನ ಕಾಲದಲ್ಲಿರುತ್ತಿತ್ತು. ಇವತ್ತು Ph.D ವ್ಯಾಸಂಗ ಮಾಡಿರುವವರಿಗೂ ಅಷ್ಟು knowledge ಇಲ್ಲ. ಶಿಕ್ಷಣದ strategy of education ನೋಡಿದಾಗ ಗುಣಮಟ್ಟ ಬಹಳ ಕೆಟ್ಟುಹೋಗಿದೆ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು:– Education demand ಮೇಲೆ ಚರ್ಚೆ ಬರುತ್ತದೆಯಲ್ಲಾ ಆಗ ಈ ವಿಷಯವನ್ನೆಲ್ಲಾ ಪ್ರಸ್ತಾಪ ಮಾಡಿ.

ಶ್ರೀ ಗುರುಪಾಟೀಲ್ ಶಿವರಾಳ್:– ಶಾಲೆಗಳಲ್ಲಿ, ಲೈಬ್ರರಿಗಳಲ್ಲಿ ಎಲ್ಲೂ ಪುಸ್ತಕಗಳಿಲ್ಲ equipments ಎಲ್ಲೂ ಕೂಡ ಇಲ್ಲ. ವಸತಿ ವಿಷಯವಾಗಿ ಹೇಳುವುದಾದರೆ, ರಾಜ್ಯದಲ್ಲಿ ಬಹಳಷ್ಟು ಜನ ಬಡವರು ವಾಸಿಸಲು ಮನೆಯಿಲ್ಲದೆ ಯಾವುದ್ಯಾವುದೋ ರೂಪದಲ್ಲಿ ಕಾಲ ಕಳೆಯುತ್ತಿದ್ದಾರೆ. ಸರ್ಕಾರ ಇದನ್ನು ಗಂಭೀರವಾಗಿ ಅನ್ನಭಾಗ್ಯದಂಥ ಯೋಜನೆಗಳನ್ನು ಕೊಡುವುದು ಬಿಟ್ಟು ವಸತಿ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಅವರು ಜೀವನಪರ್ಯಂತ ನಿಮ್ಮನ್ನು ನೆನಪು ಮಾಡಿಕೊಳ್ಳುತ್ತಾರೆ. ಎಸ್.ಸಿ/ಎಸ್.ಟಿ. ಜನರಿಗೆ ಗುತ್ತಿಗೆ ಮಾಡುವುದಕ್ಕೆ 50 ಲಕ್ಷ ರೂಪಾಯಿಗಳವರೆಗೆ ಆಯವ್ಯಯದಲ್ಲಿ ಅವಕಾಶವನ್ನು ಕಲ್ಪಿಸಿದ್ದೀರಿ. ಎಷ್ಟು ಜನರಿಗೆ ಗುತ್ತಿಗೆ ಲೈಸೆನ್ಸ್‌ಯಿದೆಯೆನ್ನುವುದನ್ನು ತಾವು ನೋಡಬೇಕಾಗುತ್ತದೆ. ಏಕೆಂದರೆ

ಬಹಳಷ್ಟು ಜನರಿಗೆ ಅವರ ಹತ್ತಿರ ಲೈಸೆನ್ಸ್ ಇಲ್ಲ. ಲೈಸೆನ್ಸ್ ಕೊಡುವುದಕ್ಕೆ ಒಂದು ರಿಲ್ಯಾಕ್ಸ್ ಮಾಡಿ ಮೊದಲು ಅವರಿಗೆ ಲೈಸೆನ್ಸ್ ಕೊಡುವಂತಹ ಕೆಲಸವನ್ನು ಮಾಡಬೇಕು. ನಗರಾಭಿವೃದ್ಧಿ ಇಲಾಖೆಯಲ್ಲಿ ಘನತ್ಯಾಜ್ಯ ವಸ್ತು ವಿಲೇವಾರಿಗೆ ಸುಮಾರು equipments ಕೊಟ್ಟಿದ್ದಾರೆ. ಆದರೆ ಅವುಗಳನ್ನು ಯಾರೂ ಕೂಡ ಸರಿಯಾದ ರೀತಿಯಲ್ಲಿ ಉಪಯೋಗ ಮಾಡುತ್ತಿಲ್ಲ. ಘನತ್ಯಾಜ್ಯ ವಸ್ತು ವಿಲೇವಾರಿಗೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಯಾವುದೇ ಕಾರ್ಯ ಇವತ್ತಿನ ದಿವಸ ನಡೆಯುತ್ತಿಲ್ಲ. ಅದನ್ನು ನೋಡುವವರು ಒಬ್ಬರೂ ಇಲ್ಲ. ಕೋಟಿಗಟ್ಟಲೆ ಹಣವನ್ನು ಕೊಟ್ಟು ಯಾವುದೇ ಕೆಲಸ ನಡೆಯದಿರುವುದನ್ನು ನೋಡಿಕೊಂಡು ಕೂರುವ ಸಂದರ್ಭ ನಮಗೆ ಬಂದಿದೆ. ಎಲ್ಲಾ ವಿಷಯಗಳನ್ನು ಪುರಸಭೆಯಲ್ಲಿ ಚರ್ಚೆ ಮಾಡಿದಾಗ ಅವರು ಅಸಹಾಯಕ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಕೊನೆಯದಾಗಿ ಇವತ್ತಿನ ದಿವಸ ಪತ್ರಕರ್ತರಿಗೆ accreditation card ಉಳ್ಳವರಿಗೆ ಮಾತ್ರ insurance ಕೊಡುತ್ತೇವೆಂಬ ಮಾತನ್ನು ಹೇಳಿದ್ದೀರಿ. ನಮ್ಮ ಭಾಗದಲ್ಲಿ ತಾಲ್ಲೂಕು ಮಟ್ಟದಲ್ಲಿರುವವರಿಗೆ accreditation card ಇರುವುದಿಲ್ಲ ಅವರಿಗೆಲ್ಲರಿಗೂ insurance ಅನ್ನು ಕೊಡಬೇಕೆಂಬ ಒತ್ತಾಯವನ್ನು ನಾನು ತಮ್ಮ ಮುಖಾಂತರ ಮಾಡುತ್ತೇನೆ. ಗುಲ್ಬರ್ಗಾ ಜಿಲ್ಲೆ ವಿಂಗಡಣೆಯಾಗಿ ಯಾದಗಿರಿ ಜಿಲ್ಲೆಯನ್ನು ಮಾಡಿದ ನಂತರ ಆಯವ್ಯಯದಲ್ಲಿ ಎಲ್ಲಾ ವಿಷಯಗಳು ಗುಲ್ಬರ್ಗಾ ಬಗ್ಗೆ ಮಾತ್ರ ಪ್ರಸ್ತಾಪವಾಗಿದೆ. ಯಾದಗಿರಿ ಜಿಲ್ಲೆ ಸಂಪೂರ್ಣವಾಗಿ ಕಡೆಗಣೆಯಾಗಿದೆ. ಗುಲ್ಬರ್ಗಾ ಜಿಲ್ಲೆಗೆಂದು ಏನು ಪ್ರಸ್ತಾಪ ಮಾಡಿದ್ದಾರೋ ಅದರಲ್ಲಿ ಯಾದಗಿರಿ ಜಿಲ್ಲೆಯನ್ನು ಸೇರಿಸಬೇಕೆಂದು ಮನವಿ ಮಾಡುತ್ತಾ, ತಮಗೆ ಧನ್ಯವಾದಗಳನ್ನು ಹೇಳುತ್ತೇನೆ.